ಇ.ಪಿ ನಂ.:4/2013
ಪಿಡಬ್ಲ್ಯು - 1

ದಿನಾಂಕ 30-07-2019 ರಂದು ಪುನಃ ಸಾಕ್ಷಿಗೆ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಪಾಟೀ ಸವಾಲುಃ ಡಿಕ್ರಿಧಾರಕರ ಪರ ಶ್ರೀ ಪಿ.ಕೆ ವಕೀಲರಿಂದ.**

ನಾನು ಶಾಲೆ ಕಲಿತಿಲ್ಲ. ಓ.ಎಸ್ ನಂಬರ 52/2013 ರಲ್ಲಿ ನನ್ನ ಮಗಳು ಜರಿನಾಬೀ ಸಾಕ್ಷ್ಯ ನುಡಿದಿದ್ದಾಳೆ ಮತ್ತು ಅದೆಲ್ಲಾ ನನಗೆ ಗೊತ್ತಿದೆ ಎಂದರೆ ಸರಿ. ನನ್ನ ಮದುವೆ ಮೊದಲು ಒಬ್ಬ ರಸೂಲ್‌ಸಾಬನ ಜೊತೆ ಆಗಿತ್ತು ಎಂದರೆ ಸರಿ. ರಸೂಲ್‌ಸಾಬ ಮತ್ತು ನನ್ನ ದಾಂಪತ್ಯದಿಂದ ಒಬ್ಬ ಮಗ ಹುಟ್ಟಿದ್ದನು ಎಂದರೆ ಸರಿ ಅಲ್ಲ. ರಸೂಲ್‌ಸಾಬನ ಜೊತೆ ನನ್ನ ಮದುವೆ ಯಾವಾಗ ಆಗಿತ್ತು ಎಂದು ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ. ರಸೂಲ್‌ಸಾಬ ಯಾವಾಗ ತೀರಿಕೊಂಡಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ. ರಸೂಲ್‌ಸಾಬ ಮತ್ತು ನನ್ನ ಮದುವೆಯ ದಾಖಲೆ ಮತ್ತು ರಸೂಲ್‌ಸಾಬನ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಮತ್ತು ರಸೂಲ್‌ಸಾಬನ ಜೊತೆ ತಲಾಖ್

ಆಗಿರುವುದಿಲ್ಲ. ನಿಪಿ-1 ರ ಮೇಲೆ ಒಂದು ಹೆಬ್ಬೆಟ್ಟಿನ ಗುರುತು ಮಾತ್ರ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ನ್ನು ಮೂಲದಾವೆ 52/2013 ರಲ್ಲಿ ಸಲ್ಲಿಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು ಆಗ ಈ ದಾಖಲೆ ಸಿಕ್ಕಿರಲಿಲ್ಲ ಈಗ ಸಿಕ್ಕಿದೆ ಆದ್ದರಿಂದ ಈಗ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಆರ್.ಎ ನಂಬರ 43/2016 ರಲ್ಲಿ ನಿಪಿ-1 ನ್ನು ಸಲ್ಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಆರ್.ಎ ನಂಬರ 43/2016 ರಲ್ಲಿ ನಾನು ನನ್ನ ಮತದಾನ ಗುರುತಿನ ಚೀಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಗುರುತಿನ ಚೀಟಿಯಲ್ಲಿ ನಾನು ಹೈದರಾಬಾದದಲ್ಲಿ ವಾಸಿಸುತ್ತೇನೆ ಎಂದು ವಿಳಾಸವಿದೆ ಎಂದರೆ ಸರಿ. ಹೈದರಾಬಾದಿನಿಂದ ಯಾವಾಗ ಬಂದಿದ್ದಿರಿ ಎಂದರೆ ಸಾಕ್ಷಿದಾರರು ನಾನು ಜೇವರ್ಗಿಯಲ್ಲಿಯೇ ವಾಸ ಮಾಡುತ್ತಿದ್ದೇನೆ ಎನ್ನುತ್ತಾರೆ. ನಾನು ಜೇವರ್ಗಿಯಲ್ಲಿ ವಾಸ ಮಾಡುತ್ತೇನೆಂದು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ಜೇವರ್ಗಿಯಲ್ಲಿರುವ ಲಾಡ್ಲೆಸಾಬನ ಮನೆಯಲ್ಲಿ ಯಾರು ಯಾರು ಬಾಡಿಗೆಯಿಂದ ವಾಸವಾಗಿದ್ದರು ಎಂದರೆ ಸಾಕ್ಷಿದಾರರು ಯಾರು ಬಾಡಿಗೆಯಿಂದ ವಾಸವಿರಲಿಲ್ಲ ಎನ್ನುತ್ತಾರೆ. ಲಾಡ್ಲೆಸಾಬನ ಮನೆಗೆ ಸಂಬಂಧಪಟ್ಟಂತೆ ಬಸವರಾಜನು ಮೊದಿನಬಾಷನ ವಿರುದ್ಧ ಒಂದು ದಾವೆ ಸಲ್ಲಿಸಿದ್ದನು ಎಂದರೆ ಸರಿ. ಸದರಿ ಮನೆಯು ಲಾಡ್ಲೆಸಾಬನ ನಂತರ ಒಬ್ಬ ರತನ್‌ಸಿಂಗ ರಾಠೋಡ ಎನ್ನುವವರ ಹೆಸರಿನಲ್ಲಿ ವರ್ಗಾವಣೆಯಾಗಿತ್ತು ಎಂದರೆ ಸರಿ. ಮೊದಿನಬಾಷನು ಪಂಚಾಯತ ಮತ್ತು ರತನ್‌ಸಿಂಗನ ವಿರುದ್ಧ ಸಲ್ಲಿಸಿದ ದಾವೆ ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಬಸವರಾಜನು ಮೊದಿನಬಾಷ ಮತ್ತು ಇತರರ ವಿರುದ್ಧ ಓ.ಎಸ್ ನಂಬರ 49/1999 ರನ್ನು ಸಲ್ಲಿಸಿದ್ದನ್ನು ಎಂದರೆ ನನಗೆ ಗೊತ್ತಿಲ್ಲ. ನಂತರ ಜೈನಾಬಿ ಮತ್ತು ಇತರರು ಸೇರಿ ಮೊದಿನಬಾಷ ಮತ್ತು ಇತರರ ವಿರುದ್ಧ ಓ.ಎಸ್ ನಂಬರ 2/2000 ನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಓ.ಎಸ್ ನಂಬರ 2/2000 ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಮೊದಿನಬಾಷ ಇತನು ಓ.ಎಸ್ ನಂಬರ 49/199 ಮತ್ತು 2/2000 ಮತ್ತು ಅವುಗಳ ಮೇಲ್ಮನವಿ ಆರ್.ಎ ಗಳಲ್ಲಿ ಸಲ್ಲಿಸಿದ ದಾಖಲೆಗಳನ್ನು ಓ.ಎಸ್ ನಂಬರ 52/2013 ರಲ್ಲಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ಖಾಜಿ ಮತ್ತು ಉಪಖಾಜಿಯವರ ನಂಬರ ಮತ್ತು ಅವರ ಹೆಸರು ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ಮತ್ತು 2 ರಲ್ಲಿ ಅವುಗಳನ್ನು ತಯಾರಿಸಿದ ದಿನಾಂಕ ಮತ್ತು ಹಸ್ತಾಕ್ಷರ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ಮತ್ತು

ನಿಪಿ-2 ರಲ್ಲಿ ಯಾರು ಸಾಕ್ಷಿದಾರರು ಎಂದು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ಮತ್ತು 2 ರಲ್ಲಿ ನಮೂದು ಮಾಡಿದ ಸಾಕ್ಷಿದಾರರು ಯಾವ ಊರಿನವರು ಎನ್ನುವುದು ನನಗೆ ಗೊತ್ತಿಲ್ಲ. ನಿಪಿ-1 ಮತ್ತು 2 ರಲ್ಲಿ ಮದುವೆ ಯಾವ ಸವಯದಲ್ಲಿ ಆಗಿದೆ ಎನ್ನುವುದು ನನಗೆ ನಮೂದು ಮಾಡಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ದಿಕ್ರಿದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ನಿಪಿ-1 ಮತ್ತು ನಿಪಿ-2 ನ್ನು ಇತ್ತಿಚಿಗೆ ಸುಳ್ಳು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯು ಈ ಮೊದಲು ಮಾರ್ಟಗೇಜ್ ಮಾಡಿಕೊಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಮೊದಿನಬಾಷನ ಚಿಕ್ಕಪ್ಪ ಮಶಾಕ್‌ಸಾಬ ಎನ್ನುವವರ ಪರಿಚಯವಿಲ್ಲ. ಲಾಡ್ಲೆಸಾಬ ಅವರಿಗೆ ಉರ್ದು ಭಾಷೆ ಓದಲು ಬರೆಯಲು ಬರುತ್ತಿತ್ತು ಎಂದರೆ ಸರಿ ಅಲ್ಲ. ಲಾಡ್ಲೆಸಾಬ ಹೆಬ್ಬೆಟ್ಟಿನ ಸಹಿ ಮಾಡುತ್ತಿದ್ದರು ಎಂದು ತೋರಿಸುವ ಬೇರೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ ಅಲ್ಲ. ಲಾಡ್ಲೆಸಾಬನಿಗೆ ಉರ್ದು ಭಾಷೆ ಓದಲು ಬರೆಯಲು ಬರುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಲಾಡ್ಲೆಸಾಬ ಹೆಬ್ಬೆಟ್ಟಿನ ಸಹಿ ಮಾಡುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಮುಖ್ಯ ವಿಚಾರಣೆಯ ಶಪಥ ಪತ್ರದಲ್ಲಿ ಏನು ಬರೆಯಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಮನೆಗೂ ಮತ್ತು ನನಗೂ ಯಾವುದೇ ಸಂಬಂಧವಿಲ್ಲ ಮತ್ತು ದಾವಾ ಮನೆಯ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿ ಅಲ್ಲ. ಈ ಕೇಸಿನ ಎದುರುದಾರನಿಗೆ ಸಹಾಯ ಮಾಡಲು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಮೊದಿನಬಾಷ ಸಲ್ಲಿಸಿದ ಪ್ರಸ್ತುತ ಪ್ರಕರಣದಲ್ಲಿ ನಾನು ಹಾಜರಾಗಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಕೇಸಿನ ಲಾಡ್ಲೆಸಾಬನ ಹೆಂಡತಿ ಅಲ್ಲ ಮತ್ತು ಇತರ 3 ನೇ ಅರ್ಜಿದಾರರು ಲಾಡ್ಲೆಸಾಬನ ಮಕ್ಕಳು ಇಲ್ಲ ಎಂದರೆ ಸರಿ ಅಲ್ಲ. 2007 ನೇ ಇಸವಿಯಲ್ಲಿ ರಜಾಕಸಾಬನು ತನ್ನ ಹೆಸರಿನಲ್ಲಿದ್ದ ಜಮೀನನ್ನು ಮಾರಾಟ ಮಾಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. 1993 ರಲ್ಲಿ ರಜಾಕಸಾಬನು ದುಬೈ ದೇಶಕ್ಕೆ ಹೋಗಿದ್ದನು ಎಂದರೆ ನನಗೆ ಗೊತ್ತಿಲ್ಲ. ಓ.ಎಸ್ ನಂಬರ 52/2013 ರಲ್ಲಿ ನಿಶಾನೆಗೊಳಪಡಿಸಲಾದ ನಿಪಿ-17 ರಲ್ಲಿ ಮೊದಿನಬಾಷ ಮತ್ತು ರಜಾಕಸಾಬ ಬೇರೆ ಬೇರೆ ವಂಶಸ್ಥರಾಗಿದ್ದಾರೆಂದು ಬರೆಯಲಾಗಿದೆ ಎಂದರೆ ಸರಿ ಅಲ್ಲ. ದಾವಾ ಮನೆಯಲ್ಲಿ ನಾನು ವಾಸ ಮಾಡುತ್ತೇನೆಂದು ತೋರಿಸಲು ನೀರು, ವಿದ್ಯುತ್ ಕರ ರಶೀದಿಗಳಾಗಲೀ ಅಥವಾ ಇತರೆ ಯಾವುದೇ ದಾಖಲೆಗಳಾಗಲೀ ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ದಾವಾ

ಆಸ್ತಿಯು ಈ ಪ್ರಕರಣದ ಲಾಡ್ಲೆಸಾಬನಿಗೆ ಹೇಗೆ ಬಂದಿದೆ ಎನ್ನುವುದು ನನಗೆ ಗೊತ್ತಿಲ್ಲ. ರಜಾಕಸಾಬನಿಗೆ ಜಮೀನು ಹೇಗೆ ಬಂದಿದೆ ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿ ಅಲ್ಲ. ರಜಾಕನಿಗೆ ತನ್ನ ತಂದೆಯಿಂದ ಜಮೀನು ಬಂದಿದೆ. ರಜಾಕನಿಗೆ ತನ್ನ ತಂದೆಯಿಂದ ಜಮೀನು ಬಂದಿದೆ ಎಂದು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ನಾನು ಈ ದಾವೆಯನ್ನು ಹೊರತುಪಡಿಸಿ ಉಳಿದ ಯಾವುದೇ ಮೂಲದಾವೆಗಳಲ್ಲಿ ಅಥವಾ ಮೇಲ್ಮನವಿಗಳಲ್ಲಿ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ರಜಾಕಸಾಬನು ವಿದೇಶಕ್ಕೆ ಹೋಗುವಾಗ ತನ್ನ ತಂದೆಯ ಹೆಸರನ್ನು ಅಸ್ಮತಅಲೀ ಎಂದು ದಾಖಲೆಗಳಲ್ಲಿ ತೋರಿಸಿದ್ದ ಎಂದರೆ ಸರಿ ಅಲ್ಲ. 1993 ನೇ ಇಸವಿಯಲ್ಲಿ ರಜಾಕಸಾಬ ವಯಸ್ಕನಾಗಿದ್ದ ಎಂದರೆ ಸರಿ ಅಲ್ಲ. 1993 ನೇ ಇಸವಿಯಲ್ಲಿ ರಜಾಕಸಾಬನಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನಿಪಿ-1 ರ ಬಗ್ಗೆ ವಕ್ಫ ಬೋರ್ಡಿನಲ್ಲಿ ಯಾವುದೇ ಷರಾ ಇಲ್ಲ ಎಂದರೆ ಸರಿ ಅಲ್ಲ. ಬೆಂಗಳೂರಿನ ವಕ್ಫ ಬೋರ್ಡಿನಿಂದ ನಿಪಿ-1 ಪಡೆದುಕೊಂಡಿಲ್ಲ ಎಂದರೆ ಸರಿ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಮದುವೆಯ ಸಮಯದಲ್ಲಿ ನನ್ನ ತಂದೆ ಜೀವಂತ ಇದ್ದಿಲ್ಲ. ನನ್ನ ಮದುವೆಯ ಸಮಯದಲ್ಲಿದ್ದ ಎಲ್ಲಾ ವ್ಯಕ್ತಿಗಳು ಮತ್ತು ಸಾಕ್ಷಿದಾರರು ಈಗ ಜೀವಂತ ಇಲ್ಲ. ನಿಪಿ-1 ರ ಭಾಷಾಂತರ ಮಾಡಿಸಲು ಯಾರ ಬಳಿ ಹೋಗಿದ್ದಿರಿ ಎಂದರೆ ಸಾಕ್ಷಿದಾರರು ನಿಪಿ-1 ರ ಭಾಷಾಂತರವನ್ನು ನನ್ನ ಮಗಳು ಹಸೀನಾ ಮಾಡಿಸಿಕೊಂಡು ಬಂದಿದ್ದಾಳೆ ಎನ್ನುತ್ತಾರೆ. ನಿಪಿ-1 ನ್ನು ಯಾರ ಬಳಿ ಭಾಷಾಂತರ ಮಾಡಿಸಿಕೊಂಡು ಬರಲಾಗಿದೆ ಎನ್ನುವ ವಿಷಯವನ್ನು ನನ್ನ ಮಗಳು ನನ್ನ ಬಳಿ ಹೇಳಿಲ್ಲ. ಹಸೀನಾಳ ಮದುವೆ ನಿರ್ದಿಷ್ಟವಾಗಿ ಯಾವಾಗ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ ಆದರೆ ಬಹಳ ದಿನಗಳ ಹಿಂದೆ ಆಗಿದೆ ಈಗ ಆಕೆಗೆ ಆರು ಜನ ಮಕ್ಕಳಿದ್ದಾರೆ. ಹಸೀನಾ ಆಗಾಗ 2-3 ದಿನ ನನ್ನ ಬಳಿ ಇದ್ದು ಹೋಗುತ್ತಾಳೆ. ನಿಪಿ-1 ಮತ್ತು 2 ನ್ನು ನ್ಯಾಯಾಲಯಕ್ಕೆ ಸಲ್ಲಿಸುವುದಕ್ಕಿಂತ ಎಷ್ಟು ದಿನ ಮೊದಲು ಹಸೀನಾ ನಿಮ್ಮ ಬಳಿ ಬಂದಿದ್ದಾಳೆ ಎಂದರೆ ಸಾಕ್ಷಿದಾರರು ಹಸೀನಾ ಮೊನ್ನೆದಿನ ನನ್ನ ಬಳಿ ಬಂದಿದ್ದಾಳೆ ಎನ್ನುತ್ತಾರೆ. ನಿಪಿ-2 ರಲ್ಲಿ ಅದನ್ನು ತಯಾರಿಸಿದ ದಿನಾಂಕ, ತಿಂಗಳು ಮತ್ತು ವರ್ಷ ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆ: 3 ನೇ ಅರ್ಜಿದಾರರ ಪರ ಶ್ರೀ ಬಿ.ಬಿ ವಕೀಲರಿಂದ.**

ರಸೂಲಸಾಬ ಸತ್ತ ಮೂರು ವರ್ಷಗಳ ನಂತರ ಲಾಡ್ಲೆಸಾಬನ ಜೊತೆ ನನ್ನ ಮದುವೆ ಆಗಿದೆ.

**ಮರು ಪಾಟೀ ಸವಾಲುಃ ಡಿಕ್ರಿಧಾರಕರ ಪರ ಶ್ರೀ ಪಿ.ಕೆ ವಕೀಲರಿಂದ.**

ರಸೂಲಸಾಬ ಸತ್ತ ಮೂರು ವರ್ಷಗಳ ನಂತರ ನಾನು ಲಾಡ್ಲೆಸಾಬನ ಜೊತೆ ಮದುವೆ ಮಾಡಿಕೊಳ್ಳುತ್ತಿದ್ದೇನೆ ಎಂದು ಯಾವುದೇ ನಿಖಾ ನಾಮದಲ್ಲಿ ಬರೆದಿಲ್ಲ ಎಂದರೆ ಸರಿ ಅಲ್ಲ. ರಸೂಲಸಾಬ ಯಾವ ದಿನಾಂಕದಂದು ಸತ್ತಿದ್ದಾನೆಂದು ತೋರಿಸುವ ದಾಖಲೆಯನ್ನು ನಾನು ಖಾಜಿಯವರಿಗೆ ಕೊಟ್ಟಿಲ್ಲ ಎಂದರೆ ಸರಿ. ರಸೂಲಸಾಬನು ಯಾವ ದಿನಾಂಕ, ಯಾವ ತಿಂಗಳು ಮತ್ತು ಯಾವ ವರ್ಷ ತೀರಿಕೊಂಡಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ. ರಸೂಲಸಾಬ ಸತ್ತ ಮೂರು ವರ್ಷಗಳ ನಂತರ ಲಾಡ್ಲೆಸಾಬನ ಜೊತೆ ನನ್ನ ಮದುವೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಿಪಿ-1 ನ್ನು ತಯಾರಿಸಿದಾಗ ರಸೂಲಸಾಬ ಜೀವಂತ ಇದ್ದ ಎಂದರೆ ಸರಿ ಅಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ